ಅನ್ನುತ್ತೆ. ಆ ಕವರುಗಳು ರುದ್ರಮುನಿಯ ಮನೇಲಿ ಸಿಕ್ಕಿದ್ರೆ ಆತ ಬ್ಲಾಕ್‌ಮೇಲ್ ಮಾಡಿದ್ದು ಸಾಬೀತಾಗುತ್ತೆ!!"

"ನಿನ್ನ ಊಹೆ ನಿಜವಿರಲೂಬಹುದು. ಅದನ್ನು ನಾಶಪಡಿಸಬೇಕು ಅನ್ನೋ ಬುದ್ಧಿವಂತಿಕೆ ರುದ್ರಮುನಿಗೆ ಎಲ್ಲಿಂದ ಬರಬೇಕು? ಅದಿರಲಿ, ನಿನ್ಗೆ ಆ ಲೀಲಾ ಯಾರು ಅಂತ ತಿಳಿದಿದೆಯೆ?" ನಾನು ಕತ್ತು ಅಡ್ಡ ಆಡಿಸಿದೆ.

"ಆಕೆ ಚಿನ್ನಪ್ಪನ ಹೆಂಡ್ತಿ! ಆಕೆಯ ಅಸಲೀ ಹೆಸರು ಭುವನ. ಕುಟ್ಟಯ್ಯನ ಹೆಂಡ್ತಿ ಹೆಸರಲ್ಲೇ ಎಸ್ಟೇಟ್ ಇರೋದು, ಅದು ಆಕೆಯ ತಂದೆದು ಅಂತ ಕೇಳ್ದೆ. ಹಾಗಾಗಿ ಕುಟ್ಟಯ್ಯ ಹೆಂಡ್ತಿಗೆ ಹೆದರುತ್ತಾನಂತೆ. ಇದನ್ನ ಬಲ್ಲ ರುದ್ರಮುನಿ ಕುಟ್ಟಯ್ಯನ ಅನೈತಿಕ ಆಟದ ಚಿತ್ರ ತೆಗ್ದು, ಬ್ಲಾಕ್‌ಮೇಲ್ ಮಾಡಿರಬಹುದು!"

"ಆದ್ರೆ ಚಿನ್ನಪ್ಪ ಯಾಕೆ ಸುಮ್ಮನಿದ್ದಾನೆ?"

"ಕುಟ್ಟಯ್ಯನಿಗೆ ಆತನ ಮೇಲೆ ಏನೋ ಹಿಡಿತವಿದೆ. ಯಾವುದೋ ಪ್ರಕರಣದಲ್ಲಿ ಚಿನ್ನಪ್ಪ ಸಿಕ್ಕಿಹಾಕಿಕೊಂಡಿದ್ದಿರಬಹುದು. ಹಣಕಾಸು ಅವ್ಯವಹಾರ ಅಥವಾ ಆ ರೀತಿಯದ್ದು. ಕುಟ್ಟಯ್ಯ ಮನಸ್ಸು ಮಾಡಿದರೆ, ಚಿನ್ನಪ್ಪನನ್ನು ಜೈಲಿಗಟ್ಟಬಲ್ಲದಂತಹದು. ಅದನ್ನು ದಾಳವಾಗಿ ಬಳಸಿದ ಕುಟ್ಟಯ್ಯ ಚಿನ್ನಪ್ಪನ ಹೆಂಡತಿಯನ್ನು ತನ್ನ ತೃಷೆ ತೀರಿಸಲು ಬಳಸಿಕೊಂಡಿರಲೇಬೇಕು. ಏನು ಮಾಡಲಾಗದ ಹತಾಶ ಸ್ಥಿತಿಯಲ್ಲಿದ್ದಾನೆ ಚಿನ್ನಪ್ಪ..."

"ಓಹ್... ಕರಮಚಂದ... ನನಗೊಂದು ವಿಷ್ಯ ಹೊಳೀತಿದೆ... ರುದ್ರಮುನಿ ಕೊಲೆಯಾದ್ರೆ... ಕುಟ್ಟಯ್ಯನ ಮೇಲೆ ಸಂಶಯ ಬಂದೇ ಬರುತ್ತೆ... ಆತನಿಗೆ ಕೊಲೆ ಮಾಡಲು ಕಾರಣವಿದೆ... ಕುಟ್ಟಯ್ಯ ಜೈಲಿಗೆ ಹೋದ್ರೆ, ಚಿನ್ನಪ್ಪನಿಗೆ ನೆಮ್ಮದಿ... ಕುಟ್ಟಯ್ಯನ ಬೆದರಿಕೆ ಇರೋಲ್ಲ... ಆತನ ಹೆಂಡ್ತಿಗೆ ಕುಟ್ಟಯ್ಯನ ಕಾಟವಿರೋಲ್ಲ... ಒಂದೇ ಕಲ್ಲಿನಿಂದ ಎರಡು ಹಕ್ಕಿಗಳು... ರುದ್ರಮುನಿಯ ನಾಪತ್ತೆಯ ಹಿಂದೆ ಚಿನ್ನಪ್ಪನ ಕೈವಾಡ ಇರಬಹುದು..."

"ಬಿದ್ದಪ್ಪ, ಈಗ ನಿನ್ನ ತಲೆ ಸರಿಯಾದ ದಿಕ್ಕಲ್ಲಿ ಓಡ್ತಿದೆ... ಭೇಷ್" ನಗುತ್ತಾ ಮಾತು ಸೇರಿಸಿದ ಕರಮಚಂದ.

"ಒಂದ್ ಸಣ್ಣ ಅನುಮಾನ... ಏಡುಕೊಂಡಲುವಿನ ಮನೇಲಿ ಕಂಡ ಆ ವಿಚಿತ್ರ ಸಂಕೇತಾಕ್ಷರಗಳು. ಅವು ಏನು? ಪ್ರಕರಣ ಸಂಬಂಧವಿಲ್ದೇ ಇದ್ರು, ಸುಮ್ನೆ ಕುತೂಹಲದಿಂದ ಕೇಳ್ದೆ, ಅಷ್ಟೇ..."

"ನಿನ್ಗೆ ಅದು ಈಗ ಯಾಕ್ ನೆನಪಾಯ್ತು? ಅದು ನರ್ಸ್‌ಗಳು ಉಪಯೋಗಿಸುವ ಭಾಷೆ. ನೀನು ಅಲ್ಲಿ ಹಿತ್ತಲಲ್ಲಿ ಒಣಗಲು ಹಾಕಿದ್ದ ಬಟ್ಟೆಗಳನ್ನು ನೋಡಿದ್ದಿಯಲ್ಲ... ಅವುಗಳಲ್ಲಿ ಬಿಳಿಯ ಫ್ರಾಕ್‌ಗಳೂ ಇದ್ದವು. ಅವು ನರ್ಸ್‌ನ ಸಮವಸ್ತ್ರ. ಆ ಕೋಣೆಲಿ ಕತ್ತರಿ, ಇತ್ಯಾದಿಗಳಿದ್ದ ಬ್ಯಾಗ್... ಅದು ನರ್ಸಿಂಗ್ ಕಿಟ್! ಪ್ರಾಯಶಃ ಏಡುಕೊಂಡಲುವಿನ ಹೆಂಡ್ತಿ ನರ್ಸ್ ಆಗಿರಬೇಕು. ಆದ್ರೆ ಅದನ್ನ ನಮ್ಮಿಂದ ಏಡುಕೊಂಡಲು ಮುಚ್ಚಿಟ್ಟಿದ್ದ..."

ಅಷ್ಟರಲ್ಲಿ ಕರಮಚಂದನ ಚರವಾಣಿ ರಿಂಗಣಿಸಿತು. ಕರೆ ಸ್ವೀಕರಿಸಿ, ಮಾತಾಡಿದ ಕರಮಚಂದ ಚಕ್ಕನೆ ಎದ್ದ,

"ಬಿದ್ದಪ್ಪ, ಒಂದು ತುರ್ತು ಕೆಲ್ಸ ಇದೆ... ನೇಟಿವ್ ಕ್ಲಬ್ಬಿನಿಂದ ಕರೆ ಬಂದಿದೆ. ಹೋಗಿ ಬರ್ತೀನಿ..." ಕೆಲ ಕ್ಷಣಗಳಲ್ಲಿ ತನ್ನ ವೇಷ ಕಳಚಿಟ್ಟು, ಹ್ಯಾಟ್ ತಲೆಗೇರಿಸಿ, ಮೆಟ್ಟಿಲುಗಳಲ್ಲಿ ಹಾರಿಕೊಂಡು ಇಳಿದು ಹೋದ ಕರಮಚಂದ.